**ಸಾಕ್ಷಿ ಯನ್ನು ದಿನಾಂಕ: 24-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ :- ಪ್ರತಿವಾದಿ ಪರ ವಕೀಲರಿಂದಃ**

ನೋಂದಾಯಿತ ಕ್ರಯಪತ್ರ ದಿನಾಂಕಃ 17-09-2018 ರ ಗಣಕೀಕೃತ ಪ್ರತಿಯನ್ನು ನಿಡಿ-2 ಎಂದು, ನೋಂದಾಯಿತ ಕ್ರಯಪತ್ರ ದಿನಾಂಕಃ 31-12-2018 ರ ಗಣಕೀಕೃತ ಪ್ರತಿಯನ್ನು ನಿಡಿ-3 ಎಂದು, ನೋಂದಾಯಿತ ಹಕ್ಕು ಬಿಡುಗಡೆ ಪತ್ರ ದಿನಾಂಕಃ 01-10-2008 ರ ಗಣಕೀಕೃತ ಪ್ರತಿಯನ್ನು ನಿಡಿ-4 ಎಂದು, ಪುಟ್ಟಮ್ಮರವರ ಮರಣ ಪ್ರಮಾಣ ಪತ್ರವನ್ನು ನಿಡಿ-5 ಎಂದು, ನೋಂದಾಯಿತ ಕ್ರಯಪತ್ರ ದಿನಾಂಕಃ 19-07-2018 ರ ಗಣಕೀಕೃತ ಪ್ರತಿಯನ್ನು ನಿಡಿ-6 ಎಂದು, ನೋಂದಾಯಿತ ಕ್ರಯಪತ್ರ ದಿನಾಂಕಃ 13-05-1995 ರ ದೃಢೀಕೃತ ಪ್ರತಿಯನ್ನು ನಿಡಿ-7 ಎಂದು, ನೋಂದಾಯಿತ ಕ್ರಯಪತ್ರ ದಿನಾಂಕಃ 15-05-1995 ರ ದೃಢೀಕೃತ ಪ್ರತಿಯನ್ನು ನಿಡಿ-8 ಎಂದು, ಎರಡು ಮ್ಯೂಟೇಶನ ರಿಜಿಸ್ಟರ್‌ಗಳನ್ನು ನಿಡಿ-9 ಮತ್ತು 10 ಎಂದು, ಐದು ಪಹಣಿ ಪತ್ರಿಕೆಗಳನ್ನು ನಿಡಿ-11 ರಿಂದ ನಿಡಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :-** ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**